ಶ್ರೀ ಕೆ. ಬಿ. ಶಾನಪ್ಪ.—ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ ....

ಅಧ್ಯಕ್ಷರು.—ಮಾನ್ಯ ಶಾಣಪ್ಪನವರೆ, ನಿಮಗೆ ನ್ಯಾಯ ಒದಗಿಸಿಕೊಡುತ್ತೇನೆ. ಆಮೇಲೆ ನಮ್ಮ ಛೇಂಬರಿಗೆ ಬನ್ನಿ. ನಾವು ನೀವು ಕೂಡಿ ಚರ್ಚೆ ಮಾಡೋಣ.

ಶ್ರೀ ಕೆ. ಬಿ. ಶಾಣಪ್ಪ.—ನಾನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸರ್ಕಾರದ ಕಾರ್ಯಕ್ರಮಗಳನ್ನು ಆ ಭಾಗದ ಶಾಸಕರು ಊರಲ್ಲಿಲ್ಲದಿದ್ದರೂ ಕೂಡ, ಅವರ ಗಮನಕ್ಕೆ ವಿಷಯವನ್ನು ತರದೇ, ಬರೀ ಜನತಾಪಕ್ಷದವರನ್ನೇ ಸೇರಿಸಿಕೊಂಡು ಮಾಡಿಕೊಂಡಂ ಬಂದಿದ್ದಾರೆ. ಇದು ಸರ್ಕಾರದ ನೀತಿಯೇ ? ಕಳೆದ ತಿಂಗಳು 27ನೇ ದಿನಾಂಕದಂದು ಎಪಿಎಸಿ. ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ಮಾನ್ಯ ಸಹಕಾರ ಮಂತ್ರಿಯವರು ನಡೆಸಿಕೊಟ್ಟು ಬಂದಿದ್ದಾರೆ.

ಅಧ್ಯಕ್ಷರು.—ನೀವು ಆಮೇಲೆ ಬನ್ನಿ. ನಾವು ನೀವು ಕೂತು ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಳಗೆ ಬಂದು ಮಾತನಾಡತಕ್ಕಂಥಾದ್ದು ಏನೂ ಇಲ್ಲ. ತಾವು ಹೊರಗೆಹೋಗಿ ಎಂದರೆ, ನಾವು ಹೋಗುತ್ತೇವೆ.

ಅಧ್ಯಕ್ಷರು.—ನೀವು ಆ ರೀತಿ ಮಾತನಾಡಿದರೆ, ಯಾವುದೂ ರಿಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಪಂಪಾಪತಿ.—ಮಾತನಾಡಲು ನಾನು ತಮ್ಮ ಪರವಾನಗಿ ಕೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಯಾವುದೇ ಕಾರ್ಯಕ್ರಮ ನಡೆದರೂ ಕೂಡ ಸ್ಥಳೀಯ ಶಾಸಕರನ್ನು ಕೇಳಬೇಕೆಂದು ಹೇಳಿದ್ದಾರೆ. ಜನತಾಪಕ್ಷದ ಅಧ್ಯಕ್ಷರನ್ನು, ಸದಸ್ಯರನ್ನು ಕರೆದುಕೊಂಡು ಮಾಡುವುದಾದರೆ, ಮಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ತಾವು ಮಾತನಾಡುವುದಕ್ಕೆ ಮುಂಚೆ, ನಮ್ಮ ಮಾತುಗಳನ್ನು ಸ್ವಲ್ಪ ಕೇಳಬೇಕು. ನಾವು ಕಾಟಾಚಾರಕ್ಕೆ ಇಲ್ಲಿ ಬಂದು ಕೂತುಕೊಂಡು ಹೋಗುವುದಕ್ಕೆ ಬಂದಿಲ್ಲ. ಯಾವುದೇ ಭಾಗದ ಶಾಸಕರೂ ಆಗಿರಲಿ, ಅವರಿಗೆ ಮರ್ಯಾದೆ ಕೊಡಬೇಕು. ಮಂತ್ರಿಗಳೂ ಕೂಡ, ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ಹೇಳುತ್ತೇನೆ. 27ನೇ ತಾರೀಖು ಎ ಪಿ ಎಂ ಸಿ. ಸಭೆಯ ಉದ್ಘಾಟನೆಯನ್ನು ಸಹಕಾರ ಮಂತ್ರಿಗಳು ಸ್ಥಳೀಯ ಶಾಸಕರನ್ನು ಕಡೆಗಣಿಸಿ, ಪ್ರಾರಂಭಮಾಡಿದ್ದಾರೆ. ಸರ್ಕಾರಿ ಆಜ್ಞೆಗಳನ್ನು ನಾನೂ ನೋಡಿದ್ದೇನೆ. ಶಾಸಕರನ್ನು ಕಡೆಗಣಿಸಿ ಕಾರ್ಯಕ್ರಮವನ್ನು ಮಾಡಬೇಕೆಂದು ಎಲ್ಲೂ ಹೇಳಿಲ್ಲ. ಸ್ಥಳೀಯ ಶಾಸಕರನ್ನು ಕರೆಯದೇ, ಅವರ ಇಷ್ಟಬಂದ ಹಾಗೆ ಮಾಡಿಕೊಳ್ಳುವುದಾದರೆ, ಮಾಡಿಕೊಳ್ಳಲಿ. ನಮ್ಮ ಅಭ್ಯಂತರವೆ ನೂ ಇಲ್ಲ. ಯಾರೇ ಮಂತ್ರಿಗಳಾಗಿರಲಿ, ಹಳ್ಳಿಗಳಿಗೆ ಹೋದಾಗ, ಗ್ರಾಮಗಳಿಗೆ ಹೋದಾಗ ಸ್ಥಳೀಯ ಶಾಸಕರ ಸಹಕಾರವನ್ನು ಪಡೆಯಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಸಹಕಾರ ಮಂತ್ರಿಗಳು ಮೇಲ್ಮನೆಯಲ್ಲಿ ಉತ್ತರ ಕೊಡುವುದಕ್ಕೆ ಹೋಗಿದ್ದಾರೆ. ಅವರು ಬಂದ ನಂತರ, ಪ್ರಸ್ತಾಪ ಮಾಡಿದರೆ ಅನುಕೂಲವಾಗುತ್ತದೆ

ಮನವಿಗಳು

ವಿಷಯ : ಸ್ಥಳೀಯ ಶಾಸಕರನ್ನು ಮಂತ್ರಿಗಳ ಸಮಾರಂಭಗಳಲ್ಲಿ ನಿರೀಕ್ಷಿಸಿರುವುದು

12-00 Noon

ಶ್ರೀ ಎಂ. ಎಸ್. ಕೃಷ್ಣನ್.—ಇವರೇ ಅದರ ಬಗ್ಗೆ ಉತ್ತರ ಕೊಡಲಿ, ಅವರು ಬಂದು ಉತ್ತರ ಕೊಟ್ಟಾಕ್ಷಣ ಅನುಕೂಲವಾಗುತ್ತದೆಂದು ಅಲ್ಲ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಆ ಬಗ್ಗೆ ತಿಳಿಸಿದ್ದೇವೆ. ಮಂತ್ರಿಗಳು ಪ್ರವಾಸ ಮಾಡತಕ್ಕ ಕಾಲದಲ್ಲಿ ಏರ್ಪಡಿಸತಕ್ಕ ಸಮಾರಂಭಗಳಲ್ಲಿ ಶಾಸಕರನ್ನು ಭಾಗಿಗಳಾಗುವಂತೆ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿ ಮಾಡದೆ ಇರುವ ಮಂತ್ರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಆ ಬಗ್ಗೆ ಸರ್ಕಾರಿ ಆದೇಶ ಇದೆ. ಅದು ರಾಜ್ಯಪತ್ರದಲ್ಲಿಯೂ ಪ್ರಕಟವಾಗಿದೆ. ಮಂತ್ರಿಗಳು ಬರುತ್ತಾರೆ, ತಾವು ಬನ್ನಿ, ಆ ಬಗ್ಗೆ ಕುಳಿತು ಚರ್ಚೆ ಮಾಡೋಣ. ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಒಳಗಿಂದೊಳಗೆ ಮಾಡುವುದು ಬೇಡ, ಬಹಿರಂಗವಾಗಿ ನಡೆಯಲಿ. ಮಂತ್ರಿಗಳು ಶಾಸಕರನ್ನು ಕಡಗಣಿಸಿದಾಗ ಅವರ ಕಾರ್ಯಕ್ರಮವನ್ನು ವಿರೋಧ ಮಾಡಲೇಬೇಕಾಗುತ್ತದೆ. ಮಾನ್ಯ ರಾಚಯ್ಯನವರ ಮಾತನ್ನು ನಾನು ಒಪ್ಪುತ್ತೇನೆ. ಅವರ ಮಾತು ಸಮಂಜಸವಾಗಿದೆ.

ಮನವಿಗಳನ್ನು ಒಪ್ಪಿಸುವುದು

Sri Malharagowda S. Patil.—Sir, I beg to present the following Petitions regarding :

a) Construction of Tank at Ammanagi village near Kurubara Kodi in Nidasosi Halla, Belguam District.

b) Construction of Lift Irrigation Scheme on the Ghataprabha river near Salemwadi, Belgaum District.

c) Improvement and widening of Roads and Bridges commencing from National Highway No. 4 near Sankeshwar through Gadahinglaja upto Maharastra border.

Mr. Speaker.—Petitions presented.

ಗಮನ ಸೆಳೆಯುವ ಸೂಚನೆಗಳು

ವಿಷಯ : ಗಂಗಾವತಿ ಠಾಣೆಯಲ್ಲಿ ಪೋಲೀಸರ ಕಿರುಕುಳದಿಂದ ಪೀರ್ ಮಹಮದ್ ಎಂಬವರು ತೀರಿಕೊಂಡಿರುವ ಬಗ್ಗೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಜೂನ್ 25ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಗಂಗಾವತಿ ಪೋಲೀಸ್ ಠಾಣೆಯಲ್ಲಿ ಪೀರ್ ಮಹಮದ್ ಎಂಬ ಯುವಕನನ್ನು ಆತಿಥ್ಯ ಮಾಡಿದ ಪ್ರಕರಣ ಹೊರಬಂದಿದೆ. ಜುಲೈ 13ರಂದು ಆತ ವಿಕ್ಟೋರಿಯ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆ. ಆ ಬಗ್ಗೆ ಗೃಹಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಬಯಸುತ್ತೇನೆ.

ರಾಯಚೂರು ಜಿಲ್ಲೆಯ ಗಂಗಾವತಿಯ ಪಿಂಜಾರು ಓಣಿಯಲ್ಲಿ 85 ವರ್ಷದ ಮೌಲಾನಸಾಬ್ ಎಂಬುವರು ಒಬ್ಬರೇ ಬೇರೆ ವಾಸವಾಗಿದ್ದರು. ಈತನ ಅಣ್ಣತಮ್ಮಂದಿರು ಬೇರೆಬೇರೆ ವಾಸವಾಗಿದ್ದು ಈತನ ಸಣ್ಣ ತಮ್ಮ ಶಮಿದ್‌ಸಾಬ್‌ನ ಎಂಟು ಹತ್ತು ವರ್ಷದ ಮಗಳು ರಜಮಾ ಎಂಬುವಳು ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ಅದರಂತೆ ದಿನಾಂಕ 29-4-85ರಂದು ಬೆಳಿಗ್ಗೆ ಸದರಿ ರಜಮಾ ಎಂಬುವಳು ತನ್ನ ತಾತನಿಗೆ ಊಟ ತೆಗೆದುಕೊಂಡು ಹೋಗಿ ಮನೆ ಹೊರಗಿನ ಬಾಗಿಲಿಗೆ ಬೀಗ ಹಾಕಿದ್ದನ್ನು ಕಂಡು ತಾತನು ಯಾವುದಾದರೂ ಊರಿಗೆ ಹೋಗಿರಬಹುದೆಂದು ಭಾವಿಸಿ ಮನೆಗೆ ವಾಪಸ್ಸು ಬಂದಳು. ಇದೇರೀತಿ 2-5-85ರವರೆಗೂ ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ವಾಪಸ್ಸು ಬರುತ್ತಿದ್ದಳು. ಆದೇದಿನ ಮೌಲಾನಸಾಬ್‌ನ ಪುತ್ರ ದೊಡ್ಡ ಶಮಿದ್‌ಸಾಬ್ ಸದರಿ ಮನೆಯಿಂದ ದುರ್ವಾಸನೆ ಬರುತ್ತಿರುವುದನ್ನು ತಿಳಿದು ಗಂಗಾವತಿ ನಗರ ಪೋಲೀಸ್ ಠಾಣೆಗೆ ಹೋಗಿ ಅಲ್ಲಿ ಕರ್ತವ್ಯದ ಮೇಲಿದ್ದ ಆರಕ್ಷಕ ಉಪ ನಿರೀಕ್ಷಕರಿಗೆ ವರದಿ ಮಾಡಲು ಅದರ ಆಧಾರದ ಮೇಲೆ ಯುಡಿ ಆರ್‌ನಂ. 3:85 ಕಲಂ 174ರ ಪ್ರಕಾರ ಪ್ರ ದಂ ಸಂ ಮೊಕದ್ದಮೆ ದಾಖಲು ಮಾಡಿಕೊಂಡು ಸದರಿ ಮನೆಯ ಹತ್ತಿರ ಹೋಗಿ ಪಂಚರ ಸಮಕ್ಷಮ ಹೊರಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆಯಿಸಿ ಒಳಗೆ ಪ್ರವೇಶಿಸಿ ನೋಡಲು ಮುದುಕ ಮೌಲಾನಸಾಬ್‌ನ ಹೆಣವು ಹಾಸಿಗೆ ಮೇಲೆ ಅಂಗಾತ ಬಿದ್ದಿದ್ದು ಕಂಡು ಬಂತು. ಆರಕ್ಷಕ ಉಪನಿರೀಕ್ಷಕರು ಶವದ ಪಂಚನಾಮೆ ಮಾಡುವಾಗ ಗಾಯಗಳು ಕಂಡುಬಂದಿರುವುದಿಲ್ಲ. ಈ ಮುದುಕನ ಸಾವಿನ ಬಗ್ಗೆ ಅವರ ರಕ್ತ ಸಂಬಂಧಿಕರಾಗಲೀ ಅಥವಾ ಅಜುಬಾಜು ವಾಸವಿರುವ ಜನರಾಗಲೀ ಯಾವ ತರಹದ ಅನುಮಾನವನ್ನೂ ವ್ಯಕ್ತಪಡಿಸಲಿಲ್ಲ, ಶವಪರೀಕ್ಷೆಯನ್ನು ಆಲ್ಲೇ ನಡೆಸಿದ ಗಂಗಾವತಿಯ ಸರ್ಕಾರಿ ವೈದ್ಯರು ಹೆಣವು ಕೊಳೆತಿರುವುದರಿಂದ ಸಾವಿನ ಬಗ್ಗೆ ಖಚಿತವಾದ ಅಭಿಪ್ರಾಯ ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ, ಆದರೂ ಮನೆಯ ಹೊರಗಿನ ಬಾಗಿಲಿಗ ಯಾರು ಬೀಗ ಹಾಕಿದರು ಎಂಬ ಬಗ್ಗೆ ತನಿಖೆ ಮುಂದುವಿರೆಸಿದಾಗ, ಆ ಓಣಿಯ ಜನರಿಂದ, ಚಿತ್ತವಾಡಗಿ ಹೊಸ ಪೇಟೆಯ ಮಹಬೂಬ್‌ನ ಮಗ ಪೀರ್ ಮಹಮದ್ ಎಂಬ ಹುಡುಗ ಬರುತ್ತಿದ್ದು, ಮೃತನ ಮೊಮ್ಮಗ